# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ನವೆಂಬರ್ 09, 2020

ಸಂಪುಟ : 47 ಸಂಚಿಕೆ : 190 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com




ಅಂಧಕಾರವನ್ನು ಕಳೆದು ಆನಂದದ ಬೆಳಕು ನೀಡುವ ದೀಪಾವಳಿ ಹಬ್ಬಕ್ಕಾಗಿ ಹಣತೆಯ ಖರೀದಿಯಲ್ಲಿ ನಿರತರಾಗಿರುವ ನಾಗರಿಕರು.

## ಪಶ್ಚಿಮ ಘಟ್ಟದ ಸೂಕ್ಷ್ಮ ವಲಯ ಪ್ರಶ್ನಿಸಿ ಸುಪ್ರೀಂನಲ್ಲಿ ಅರ್ಜಿ

ನವದೆಹಲಿ, ನ. 8 – ಪಶ್ಚಿಮ ಘಟ್ಟದಲ್ಲಿ ಆರು ರಾಜ್ಯಗಳ 56,825 ಚದುರ ಕಿ.ಮೀ. ಪ್ರದೇಶವನ್ನು ಸೂಕ್ಷ್ಮ ಪರಿಸರ ವಲಯ ಎಂದು ಘೋಷಿಸಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. 2018ರಲ್ಲಿ ಈ ಬಗ್ಗೆ ಕೇಂದ್ರ ಪರಿಸರ ಸಚಿವಾಲಯ ಕರಡು ಅಧಿಸೂಚನೆ ಹೊರಡಿಸಿತ್ತು.

ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಹಾಗೂ ತಮಿಳುನಾಡುಗಳಲ್ಲಿ ಪಶ್ಚಿಮ ಘಟ್ಟವಿದ್ದು, ಇದು ವಿಶ್ವದ ಎಂಟು ಅತಿ ಹೆಚ್ಚಿನ ಜೀವವೈವಿಧ್ಯ ತಾಣಗಳಲ್ಲಿ ಒಂದಾಗಿದೆ.

ಸರ್ಕಾರೇತರ ಸಂಘಟನೆಯಾದ ರಕ್ಷಕ ಶಬ್ದಂ ಪರ ವಕೀಲ ಸುವಿದತ್ತ ಎಂ.ಎಸ್. ಅರ್ಜಿ ದಾಖಲಿಸಿದ್ದಾರೆ. ಪಶ್ಚಿಮ ಘಟಕ್ಕೆ ಸಂಬಂಧಿಸಿದಂತೆ ನೀಡಲಾಗಿರುವ ಕಸ್ತೂರಿರಂಗನ್ ವರದಿಯನ್ನು ಕೇಂದ್ರ ಹಾಗೂ ಕೇರಳ ಸರ್ಕಾರಗಳು ಜಾರಿಗೆ ತರದಂತೆ ನಿರ್ದೇಶನ ನೀಡಬೇಕು ಎಂದು ಅರ್ಜಿಯಲ್ಲಿ ಕೇಳಲಾಗಿದೆ.



ಸರ್ಕಾರ ಸೂಕ್ಷ್ಮ ವಲಯ ಘೋಷಿಸುವುದು ಸಂವಿಧಾನದ 21ನೇ ವಿಧಿಯ ಅನ್ವಯ ನೀಡಲಾಗಿರುವ ಜೀವನದ ಹಕ್ಕು ಹಾಗೂ ರೈತರ ಜೀವನೋಪಾಯದ ಉಲ್ಲಂಘನೆಯಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

2010ರಲ್ಲಿ ಮಾಧವ್ ಗಾಡ್ಗಿಲ್ ನೇತೃತ್ವದಲ್ಲಿ ಪಶ್ಚಿಮ ಘಟ್ಟಗಳ ಕುರಿತು ಜೀವವೈವಿಧ್ಯತೆಯ ಪರಿಣಿತರ ಸಮಿತಿ ರಚಿಸಲಾಗಿತ್ತು. ಸಮಿತಿ 2011ರಲ್ಲಿ ವರದಿ ಸಲ್ಲಿಸಿತ್ತು. ವರದಿಯ ಬಗ್ಗೆ ಆಕ್ಷೇಪಣೆಗಳು ವ್ಯಕ್ತವಾದ ನಂತರ ಕೆ. ಕಸ್ತೂರಿರಂಗನ್ ನೇತೃತ್ವದ ಉನ್ನತ ಹಂತದ ಸಮಿತಿ ರಚಿಸಲಾಗಿತ್ತು. ಸಮಿತಿ 2013ರಲ್ಲಿ ತನ್ನ ವರದಿ ಸಲ್ಲಿಸಿತ್ತು.

2018ರಲ್ಲಿ ಹೊರಡಿಸಲಾದ ಅಧಿಸೂಚನೆಯನ್ನು ಕೇರಳ ಜಾರಿಗೆ ತಂದರೆ ಲಕ್ಷಾಂತರ ರೈತರು ಕೃಷಿ ಜಮೀನು ಕಳೆದುಕೊಳ್ಳಲಿದ್ದಾರೆ. ರೈತರ ಹಿತ ಕಾಯಲು ಆದೇಶಕ್ಕೆ ತಡೆಯಾಜ್ಞೆ ಹೊರಡಿಸಬೇಕು ಎಂದು ಕೋರಲಾಗಿದೆ.

## ಕಾಗದದ ಲೋಟ ಆರೋಗ್ಯಕ್ಕೆ ಹಾನಿಕರ : ಐಐಟಿ ವರದಿ



ನವದೆಹಲಿ, ನ. 8 – ಕಾಗದದ ಲೋಟಗಳಿಂದ ಟೀ - ಕಾಫಿ ಸೇವನೆ ಮಾಡುವುದು ಆರೋಗ್ಯಕ್ಕೆ ಹಿತವಲ್ಲ. ಈ ರೀತಿಯ ಲೋಟ ಗಳಿಂದಾಗಿ ಮೈಕ್ರೋಪ್ಲಾಸ್ಟಿಕ್ ಕಣ ಗಳು ದೇಹ ಸೇರಿಕೊಂಡು ಹಾನಿ ಮಾಡುತ್ತವೆ ಎಂದು ಖರಗ್ ಪುರದ ಐಐಟಿ ನಡೆಸಿದ ಅಧ್ಯಯನ ತಿಳಿಸಿದೆ.

ಐಐಟಿ ಖರಗ್‌ಪುರದ ಅಸೋಸಿಯೇಟ್ ಪ್ರೊಫೆಸರ್ ಸುಧಾ ಗೋಯಲ್ ಅವರ ನೇತೃತ್ವದಲ್ಲಿ ನಡೆಸಿದ ಅಧ್ಯಯನದ ಪ್ರಕಾರ, ಬಳಸಿ ಬಿಸಾಕುವ ಲೋಟಗಳು ಚಹಾ ಸೇವನೆಗೆ ಜನರ ಜನಪ್ರಿಯ ಆಯ್ಕೆಯಾಗಿದೆ.

ಬಿಸಿಯಾದ ದ್ರವವನ್ನು ಲೋಟಕ್ಕೆ ಹಾಕುವುದರಿಂದ ಅದರಲ್ಲಿ ಮೈಕ್ರೋಪ್ಲಾಸ್ಟಿಕ್ ಹಾಗೂ ಇತರೆ ಹಾನಿಕಾರಕ ಅಂಶಗಳು ಕರಗುತ್ತವೆ. ಸಾಮಾನ್ಯವಾಗಿ ಇಂತಹ (2ನೇ ಪುಟಕ್ಕೆ)

## ನಾಯಕತ್ವದ ಬಗ್ಗೆ ಹೇಳಿಕೆ ನೀಡದಂತೆ ರಾಜ್ಯ ಕಾಂಗ್ರೆಸ್ ಸೂಚನೆ


ಬೆಂಗಳೂರು, ನ. 8 - ಪಕ್ಷದ ಮುಂದಿನ ರಾಜ್ಯ ನಾಯಕತ್ವದ ಬಗ್ಗೆ ಯಾವುದೇ ಹೇಳಿಕೆ ನೀಡದಂತೆ ರಾಜ್ಯ ಕಾಂಗ್ರೆಸ್ ತನ್ನ ನಾಯಕರು ಹಾಗೂ ಕಾರ್ಯಕರ್ತರಿಗೆ ತಿಳಿಸಿದೆ. ಕಾಂಗ್ರೆಸ್ ಸರ್ಕಾರ ರಚಿಸಿದಾಗ ಯಾರು ನಾಯಕರಾಗ ಲಿದ್ದಾರೆ ಎಂಬ ಬಗ್ಗೆ ಕೆಲವರು ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ.

ಸಾರ್ವಜನಿಕವಾಗಿ ಈ ರೀತಿಯ ಚರ್ಚೆಗಳು ನಡೆಯಬಾರದು ಎಂದು ಹೇಳಿರುವ ಪಕ್ಷದ ಶಿಸ್ತು ಸಮಿತಿ, ನಾಯಕತ್ವದ ಪ್ರಶ್ನೆ ಉದ್ಭವಿಸಿದ ಸಂದರ್ಭದಲ್ಲಿ ಈ ಬಗ್ಗೆ ನಿರ್ಧರಿಸಲಾಗುವುದು ಎಂದು ಹೇಳಿದೆ.

ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಬೇಕು ಎಂದು ಕೆಲ ನಾಯಕರು ಇತ್ತೀಚೆಗೆ ಹೇಳಿಕೆ (2ನೇ ಪುಟಕ್ಕೆ)

## ಶಿವಸಿಂಪಿ ಸಮಾಜದ ಸಾಮಾಜಿಕ ನ್ಯಾಯಕ್ಕೆ ನಾಯಕತ್ವ ಅಗತ್ಯವಿದೆ : ಬಸವಪ್ರಭು ಶ್ರೀ

ದಾವಣಗೆರೆ, ನ.8- ಸಂಘಟನೆಯಿಂದ ನಾವೆಲ್ಲರೂ ಒಗ್ಗಟ್ಟಾಗಿ ಹೋರಾಡಿದರೆ ಮಾತ್ರ ಸಮಾಜಕ್ಕೆ ಸಿಗಬೇಕಾದ ಸಾಮಾಜಿಕ ನ್ಯಾಯ ದೊರೆಯಲು ಸಾಧ್ಯ ಎಂದು ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಅಭಿಪ್ರಾಯಪಟ್ಟರು.



ನಗರದ ಶಿವಸಿಂಪಿ ಸಮಾಜದ ವತಿಯಿಂದ ಸಮಾಜದ ಕಚೇರಿಯಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಸರಳ ಕನ್ನಡ ರಾಜ್ಯೋತ್ಸವ, ಮುರುಘಾ ಶ್ರೀ ಪ್ರಶಸ್ತಿಗೆ ಭಾಜನರಾದ ಚಿತ್ರದುರ್ಗದ ಷಣ್ಮುಖಪ್ಪ ಅವರಿಗೆ ಸನ್ಮಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ನಿಮ್ಮ ಕಾಯಕ ಸೂಜಿ ಕಾಯಕ. ಆ ಸೂಜಿ ಕಾಯಕದಂತೆ ಕೆಲಸ ಮಾಡಿ ಒಗ್ಗಟ್ಟಾದಾಗ, ಸುಂದರ ಸಮಾಜ ರೂಪುಗೊಳ್ಳುತ್ತದೆ. ಗುಂಪುಗಾರಿಕೆ ಯಿಂದ ಸಮಾಜ ಹಿನ್ನೆಡೆಯಾಗಲಿದೆ. ಅದಕ್ಕಾಗಿ ಒಬ್ಬ ನಾಯಕ ಬೇಕು. ಆ ನಾಯಕತ್ವ ಸಾಮರ್ಥ್ಯ ಷಣ್ಮುಖಪ್ಪ ಅವರಲ್ಲಿ ಇದೆ. ಆದ್ದರಿಂದಲೇ ಮುರುಘಾ ಶರಣರು ಮುರುಘಾ ಶ್ರೀ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಷಣ್ಮುಖಪ್ಪ ಅವರು, ಎಸ್. ನಿಜಲಿಂಗಪ್ಪ ಅವರು ದಾವಣಗೆರೆಯನ್ನು ರಾಜಧಾನಿ ಮಾಡಲು ಸಂಸತ್ತಿನಲ್ಲಿ ಮಂಡಿಸಿದಾಗ ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತರಾಯ ಬೆಂಗಳೂರನ್ನು ರಾಜಧಾನಿಯಾಗಿ ಮಾಡಿದರು. ಇಲ್ಲದಿದ್ದರೆ ದಾವಣಗೆರೆ ರಾಜಧಾನಿಯಾಗಿರುತ್ತಿತ್ತು ಎಂದರು.

ಶಿವಸಿಂಪಿ ಸಮಾಜದಲ್ಲಿ ಎಲ್ಲರೂ ನಾಯಕರುಗಳಾಗಿ ಗುಂಪುಗಾರಿಕೆ ನಡೆಯುತ್ತಿದೆ. ಹೇಳಿದ ಮಾತುಗಳನ್ನು ಕೇಳುತ್ತಿಲ್ಲ. ಹಾಗಾಗಿ ಸಮಾಜ ಹಿನ್ನಡೆ ಕಾಣುತ್ತಿದೆ. ಇದಕ್ಕೆ ಒಬ್ಬ ಉತ್ತಮವಾದ ನಾಯಕ ಬೇಕು. ನಾಯಕರೂ ಸಹ ಸಾಮಾನ್ಯ ಕಾರ್ಯಕರ್ತನಾಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ಸಮಾಜವನ್ನು ಮುನ್ನಡೆಸಿಕೊಂಡು ಹೋಗಲು (3ನೇ ಪುಟಕ್ಕೆ)

## ಗುಂಡಿನ ಚಕಮಕಿ : ನಾಲ್ವರು ಭದ್ರತಾ ಸಿಬ್ಬಂದಿ ಹುತಾತ್ಮ

**ನುಸುಳಲು ಯತ್ನಿಸಿದ್ದ ಮೂರು ಉಗ್ರರು ಹತ**

ಶ್ರೀನಗರ, ನ. 8 – ಜಮ್ಮು ಮತ್ತು ಕಾಶ್ಮೀರದ ಮಚಿಲ್ ವಲಯದ ನಿಯಂತ್ರಣ ರೇಖೆಯಲ್ಲಿ ಉಗ್ರರು ನುಸುಳುವಿಕೆ ಯತ್ನ ನಡೆಸಿದಾಗ ಗುಂಡಿನ ಚಕಮಕಿ ನಡೆದು, ಭಾರತೀಯ ಸೈನ್ಯದ ಅಧಿಕಾರಿ ಸೇರಿದಂತೆ ನಾಲ್ವರು ಭದ್ರತಾ ಸಿಬ್ಬಂದಿ ಹುತಾತ್ಮರಾಗಿದ್ದಾರೆ.

ನುಸುಳುವಿಕೆಗೆ ಉಗ್ರರು ನಡೆಸಿದ ಯತ್ನ ವಿಫಲವಾಗಿದ್ದು, ಮೂವರು ಉಗ್ರರು ಹತರಾಗಿದ್ದಾರೆ. ಕಾರ್ಯಾಚರಣೆ ಸ್ಥಳದಲ್ಲಿ ಎರಡು ಎ.ಕೆ. ರೈಫಲ್, ಪಿಸ್ತೂಲ್, ರೇಡಿಯೋ ಸೆಟ್ ಹಾಗೂ 50 ಸಾವಿರ ರೂ. ಗಳನ್ನು ವಶಪಡಿಸಿಕೊಳ್ಳಲಾಗಿದೆ. ಶನಿವಾರ ಬೆಳಿಗ್ಗೆ 1 ಗಂಟೆ ಸಮಯದಲ್ಲಿ ಬಿ.ಎಸ್.ಎಫ್. ಗಸ್ತು ಸಿಬ್ಬಂದಿಗೆ ಗಡಿ ಬೇಲಿಯಲ್ಲಿ ಶಂಕಾಸ್ಪದ ಚಟುವಟಿಕೆ ಕಾಣಿಸಿತು.

ನುಸುಳುಕೋರರನ್ನು ಬಿ.ಎಸ್.ಎಫ್. ಸಿಬ್ಬಂದಿ ಎದುರಿಸಿದರು. ನಂತರ ಸ್ಥಳಕ್ಕೆ ಮತ್ತಷ್ಟು ಭದ್ರತಾ ಸಿಬ್ಬಂದಿಯನ್ನು ರವಾನಿಸಲಾಗಿತ್ತು.

ಈಗಲೂ ಸಹ ಕಾರ್ಯಾಚರಣೆ ನಡೆಯುತ್ತಿದೆ ಎಂದು ಸೈನ್ಯದ ವಕ್ತಾರರು ಹೇಳಿದ್ದಾರೆ.

## ನೋಟು ರದ್ದತಿಯಿಂದ ಆರ್ಥಿಕತೆ ನಾಶ : ಕಾಂಗ್ರೆಸ್

ನವದೆಹಲಿ, ನ. 8 - ನೋಟು ರದ್ದತಿಗೆ ನಾಲ್ಕು ವರ್ಷ ತುಂಬಿದ ಸಂದರ್ಭದಲ್ಲಿ ಮೋದಿ ಸರ್ಕಾರದ ಕ್ರಮವನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್, ಇದರಿಂದಾಗಿ ದೇಶದ ಆರ್ಥಿಕತೆ ನಾಶವಾಗಿದೆ ಎಂದು ಆರೋಪಿಸಿದೆ.

ನವೆಂಬರ್ 8, 2016ರಂದು ಪ್ರಧಾನಿ ನರೇಂದ್ರ ಮೋದಿ ಅವರು 500 ರೂ. ಹಾಗೂ 1,000 ರೂ.ಗಳ ನೋಟುಗಳನ್ನು ರದ್ದುಗೊಳಿಸಿದ್ದರು.

ನೋಟು ರದ್ದತಿಯನ್ನು 'ವಿಶ್ವಾಸಘಾತದ ದಿನ' ಎಂದು ಹೇಳಿರುವ ಕಾಂಗ್ರೆಸ್, ಸಾಮಾಜಿಕ ಮಾಧ್ಯಮಗಳಲ್ಲೂ ಈ ಬಗ್ಗೆ ಅಭಿಯಾನ ನಡೆಸಿದೆ.

ನೋಟು ರದ್ದತಿ ಜಾರಿಗೆ ತಂದ ರೀತಿ ಮತ್ತು ನಿರ್ವಹಣೆ ಯಲ್ಲಿ ಬೃಹತ್ ವೈಫಲ್ಯವಾಗಿದೆ. ಇದು ಸಂಘಟಿತ ಲೂಟಿ, ಜನಸಾಮಾನ್ಯ (3ನೇ ಪುಟಕ್ಕೆ)

## ನೋಟು ರದ್ದತಿಯಿಂದ ಕಪ್ಪು ಹಣ ಇಳಿಕೆ : ಪ್ರಧಾನಿ

ನವದೆಹಲಿ ನ. 8 – ನೋಟು ರದ್ದತಿ ಕಾರಣದಿಂದಾಗಿ ಕಪ್ಪು ಹಣ ಕಡಿಮೆಯಾಗಿದೆ, ತೆರಿಗೆ ಪಾವತಿ ಹೆಚ್ಚಾಗಿದೆ ಹಾಗೂ ಆರ್ಥಿಕತೆ ಔಪಚಾರಿಕ ವಲಯಕ್ಕೆ ಬಂದಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ನೋಟು ರದ್ದತಿಗೆ ನಾಲ್ಕು ವರ್ಷ ತುಂಬಿದ ಸಂದರ್ಭದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

ನವೆಂಬರ್ 8, 2016ರಂದು ಪ್ರಧಾನ ಮಂತ್ರಿ ಮೋದಿ ಅವರು 500 ರೂ. ಹಾಗೂ 1000 ರೂ.ಗಳ ನೋಟುಗಳನ್ನು ಮಧ್ಯ ರಾತ್ರಿಯಿಂದ ಜಾರಿಯಾಗುವಂತೆ ರದ್ದುಗೊಳಿಸಿದ್ದರು.

ಟ್ವಿಟ್ಟರ್‌ನಲ್ಲಿ ಹೇಳಿಕೆ ನೀಡಿರುವ ಪ್ರಧಾನಿ ಮೋದಿ, ನೋಟು ರದ್ದತಿಯಿಂದ ಆದ ಲಾಭಗಳ ಬಗ್ಗೆ ವಿವರ ನೀಡಿದ್ದಾರೆ

ನೋಟು ರದ್ದತಿಯಿಂದ ಕಪ್ಪು ಹಣ (3ನೇ ಪುಟಕ್ಕೆ)

## ಕಲಿಕೆಯಲ್ಲಿ ನಿರಂತರ ಪ್ರಯತ್ನವಿದ್ದರೆ ಯಶಸ್ಸು ಸಾಧ್ಯ

**ಡಾ. ಕಿಕ್ಕೇರಿ ಕೃಷ್ಣಮೂರ್ತಿ ಅಭಿಮತ**

ದಾವಣಗೆರೆ, ನ. 8- ಯಾವುದೇ ಕಲಿಕೆಯಾಗಲೀ ನಿರಂತರ ಪ್ರಯತ್ನದಿಂದ ಮಾತ್ರ ಯಶಸ್ವಿಯಾಗಲು ಸಾಧ್ಯ ಎಂದು ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಅಧ್ಯಕ್ಷರೂ, ಹಿರಿಯ ಗಾಯಕರೂ ಆದ ಡಾ. ಕಿಕ್ಕೇರಿ ಕೃಷ್ಣಮೂರ್ತಿ ಪ್ರತಿಪಾದಿಸಿದರು.

ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಮತ್ತು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಇವರ ಜಂಟಿ ಆಶ್ರಯದಲ್ಲಿ ನಗರದ ಆರ್. ಎಚ್. ಗೀತಾ ಮಂದಿರದಲ್ಲಿ ಇಂದು ನಡೆದ ಫೇಸ್‌ಬುಕ್‌ಗಾಗಿ ಗೀತ ಗಾಯನ ತರಬೇತಿ ಶಿಬಿರದ ಚಿತ್ರೀಕರಣ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ರಾಜ್ಯೋತ್ಸವ ನವೆಂಬರ್ ತಿಂಗಳಿಗಷ್ಟೇ ಸೀಮಿತವಾಗಿರದೇ ಅದು ನಿತ್ಯೋತ್ಸವ ಆಗಬೇಕು. ಆಗ ಕನ್ನಡ ಭಾಷೆಯನ್ನು ಬೆಳೆಸಿ, ಉಳಿಸಲು ಸಾಧ್ಯ ಎಂದು ಅಭಿಪ್ರಾಯ ಪಟ್ಟ ಅವರು, (2ನೇ ಪುಟಕ್ಕೆ)

## ಅಪ್ರಾಪ್ತೆ ಮೇಲೆ ಹಲ್ಲೆ : ಮಹಿಳಾ ಪೊಲೀಸರ ವಿರುದ್ಧ ಎಫ್‌ಐಆರ್

ಮಂಗಳೂರು, ನ. 8 - ತನ್ನನ್ನು ಮದುವೆಯಾಗುವಂತೆ ಪೀಡಿಸುತ್ತಿದ್ದ ವ್ಯಕ್ತಿಯ ವಿರುದ್ಧ ದೂರು ನೀಡಿದ ಅಪ್ರಾಪ್ತೆಯ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಮೂವರು ಮಹಿಳಾ ಸಿಬ್ಬಂದಿ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಪ್ರಥಮ ಪಿಯು ವಿದ್ಯಾರ್ಥಿನಿಯಾಗಿರುವ ಅಪ್ರಾಪ್ತೆಯ ತಂದೆ - ತಾಯಿ ನೀಡಿರುವ ದೂರು ಆಧರಿಸಿ ಬಜ್ಪೆ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಿಕೊಳ್ಳಲಾಗಿದೆ.

ಸಾಮಾಜಿಕ ಮಾಧ್ಯಮದಲ್ಲಿ ಗೆಳೆಯನಾಗಿದ್ದ ಓರ್ವ ಪೀಡಿಸುತ್ತಿರುವುದಾಗಿ ಅಪ್ರಾಪ್ತೆ ದೂರು ನೀಡಿದ್ದರು. ಆದರೆ, ಪೊಲೀಸರು ಪ್ರಕರಣ ದಾಖಲಿಸಿಕೊಂಡಿರಲಿಲ್ಲ. ನಂತರ ಪೊಲೀಸ್ ಅಧಿಕಾರಿಗಳು ಹಲ್ಲೆ ನಡೆಸಿರುವುದಾಗಿ ದೂರಲಾಗಿದೆ.

ಅಪ್ರಾಪ್ತೆಯನ್ನು ವೆನ್‌ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

## ಡಾ. ಎಂ.ಜಿ. ಈಶ್ವರಪ್ಪ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ



ಬೆಂಗಳೂರು, ನ. 8 - ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ನಾಡು - ನುಡಿಗೆ ಸಲ್ಲಿಸಿದ ಸೇವೆಗಾಗಿ ವಿವಿಧ ಕ್ಷೇತ್ರ ಗಳ ಸಾಧಕರಿಗೆ ಕರ್ನಾಟಕ ಸರ್ಕಾರವು ಪ್ರತಿ ವರ್ಷ ಕೊಡ ಮಾಡುವ 2020ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ ದಾವಣಗೆರೆಯ ಜಾನಪದ ವಿದ್ವಾಂಸ ಡಾ. ಎಂ.ಜಿ. ಈಶ್ವರಪ್ಪ ಅವರಿಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸಿದ್ದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಈ ಪ್ರಶಸ್ತಿಯು ಒಂದು ಲಕ್ಷ ರೂ. ನಗದು, 25 ಗ್ರಾಂ ಚಿನ್ನ, ಸ್ಮರಣಿಕೆಯನ್ನೊಳಗೊಂಡಿದ್ದು, ಡಾ. ಎಂ.ಜಿ. ಈಶ್ವರಪ್ಪ ಅವರೂ ಸೇರಿದಂತೆ, ಪ್ರಶಸ್ತಿಗೆ ಆಯ್ಕೆಯಾಗಿದ್ದ ಎಲ್ಲಾ 65 ಸಾಧಕರನ್ನು ಮುಖ್ಯಮಂತ್ರಿಗಳು ಪೇಟ ತೊಡಿಸಿ, ಸನ್ಮಾನಿಸಿ ಗೌರವಿಸುವುದರ ಮೂಲಕ ಪ್ರಶಸ್ತಿ ಪ್ರದಾನ ಮಾಡಿದರು.

ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ಸಚಿವ ಸಿ.ಟಿ. ರವಿ, ಲೋಕಸಭಾ ಸದಸ್ಯ ತೇಜಸ್ವಿ ಸೂರ್ಯ ಮುಂತಾದ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ರಾಜ್ಯದಲ್ಲಿ ನೇಕಾರರ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯ

ರಾಣೇಬೆನ್ನೂರು, ನ.8- ಆಂಧ್ರಪ್ರದೇಶದಲ್ಲಿ ಮಾಡಿರುವ ದೇವಾಂಗ ಅಭಿವೃದ್ಧಿ ನಿಗಮದ ಮಾದರಿಯಲ್ಲೇ ರಾಜ್ಯದಲ್ಲೂ ಕೂಡ ನೇಕಾರರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕೆಂದು ರಾಜ್ಯ ಬಿಜೆಪಿ ನೇಕಾರ ಪ್ರಕೋಷ್ಠದ ವತಿಯಿಂದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ನಗರದ ಬಿಜೆಪಿ ಮುಖಂಡ ಹಾಗೂ ನೇಕಾರರ ಪ್ರಕೋಷ್ಠದ ರಾಜ್ಯ ಸಂಚಾಲಕ ಡಾ.ಬಸವರಾಜ ಕೇಲಗಾರ ಹೇಳಿದರು.

ಮಂಗಳೂರಿನಲ್ಲಿ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯ ನಂತರ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬಂದು ಒಂದೂವರೇ ವರ್ಷವಾದರೂ ಇಲ್ಲಿಯವರಿಗೂ ನೇಕಾರರಿಗೆ ವಿಧಾನ ಪರಿಷತ್ ಸದಸ್ಯರಾಗಲೀ, ನಿಗಮ-ಮಂಡಳಿಗಳ ಅಧ್ಯಕ್ಷ ಹಾಗೂ ನಿರ್ದೇಶಕರ ಹುದ್ದೆಗಳನ್ನು ನೀಡದೇ ಇರುವುದು ನೇಕಾರ ಸಮುದಾಯವು ಪಕ್ಷದ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುವ ಆತಂಕ ಎದುರಾಗಿದೆ. ಇನ್ನೂ ನೆರೆ ರಾಜ್ಯದಲ್ಲಿ ದೇವಾಂಗ ಅಭಿವೃದ್ಧಿ ನಿಗಮ ರಚಿಸಿ, ನೇಕಾರರಿಗೆ ಆರ್ಥಿಕ ನೆರವು ನೀಡಿದೆ. ಇದೇ ಮಾದರಿಯಲ್ಲಿ ರಾಜ್ಯದಲ್ಲೂ ಕೂಡ ನೇಕಾರರ ಅಭಿವೃದ್ಧಿ ನಿಗಮ ಸ್ಥಾಪಿಸಿ, 100 ಕೋಟಿ ರೂ. ವಿಶೇಷ ಅನುದಾನ ನೀಡಬೇಕು ಎಂದರು.



ನೇಕಾರರ ಸಮುದಾಯಗಳ ಜನಸಂಖ್ಯೆಗಿಂತ ಕಡಿಮೆ ಜನಸಂಖ್ಯೆ ಹೊಂದಿರುವ ವಿಶ್ವಕರ್ಮ, ಬೆಸ್ತ ಸಮುದಾಯಗಳಿಗೆ ನಿಗಮಗಳನ್ನು ರಚಿಸಿರುವಂತೆ ನೇಕಾರ ಅಭಿವೃದ್ಧಿ ನಿಗಮ ರಚಿಸುವುದರ ಕಡೆ ಸರ್ಕಾರ ಗಮನಹರಿಸಬೇಕು. ಮಹಾರಾಷ್ಟ್ರ ರಾಜ್ಯದಲ್ಲಿ ನೀಡಿರುವಂತೆ ಇಲ್ಲಿಯೂ ಕೂಡ ನೇಕಾರರಿಗೆ ಶೇ.2ರ ಮೀಸಲಾತಿ ನೀಡಿದರೆ, ಸಮುದಾಯವು ಶೈಕ್ಷಣಿಕವಾಗಿ ಮುಂದುವರೆಯಲು ಸಾಧ್ಯವಾಗುತ್ತಿತ್ತು. ರಾಜ್ಯದಲ್ಲಿರುವ ದೇವಾಂಗ, ಕುರುಹಿನಶೆಟ್ಟಿ, ಪದ್ಮಶಾಲಿ, ಪಟ್ಟಸಾಲಿ, ತೊಗಟ ವೀರ, ಶೆಟ್ಟಿಗಾರ, ಸ್ವಕುಳಸಾಳಿ, ಕೋಷ್ಠಿ, ಹಟಗಾರ, ಶಿವಸಮಸಾಲಿ, ಜಾಡ ಹೆಸರಿನಿಂದ ಗುರುತಿಸ ಲ್ಪಟ್ಟಿದ್ದು, ಅಂದಾಜು 50 ಲಕ್ಷ ಜನಸಂಖ್ಯೆಯನ್ನು ನೇಕಾರ ಸಮುದಾಯ ಒಳಗೊಂಡಿದೆ. ಆದರೂ ಸಹಿತ ಪ್ರಗತಿ ಸಾಧ್ಯವಾಗುತ್ತಿಲ್ಲ ಎಂದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ತಡೆ ಹಿಡಿದಿರುವ ವಿದ್ಯಾಸಿರಿ ಯೋಜನೆಯನ್ನು ಪುನರಾರಂಭಿಸಬೇಕು.

ನೇಕಾರ ಸಮುದಾಯಗಳ ಶೇ.90 ಜನರು ಬಿಜೆಪಿ ಬಗ್ಗೆ ವಿಶ್ವಾಸವಿಟ್ಟುಕೊಂಡು ಬೆಂಬಲಿಸುತ್ತಾ ಬಂದಿದ್ದಾರೆ. ಆದ್ದರಿಂದ ಸರ್ಕಾರ ನೇಕಾರರ ಅಸಮಾಧಾನಕ್ಕೆ ಗುರಿಯಾಗದೇ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿದರು.

ಸಹ ಸಂಚಾಲಕ ನಾರಾಯಣಸ್ವಾಮಿ ಸೇರಿದಂತೆ ಮತ್ತಿತರರು ಇದ್ದರು.

> **‘ ಮಹಾರಾಷ್ಟ್ರ ರಾಜ್ಯದಲ್ಲಿ ನೀಡಿರುವಂತೆ ಇಲ್ಲಿಯೂ ಕೂಡ ನೇಕಾರರಿಗೆ ಶೇ.2 ಮೀಸ ಲಾತಿ ನೀಡಿದರೆ ಸಮುದಾಯವು ಶೈಕ್ಷಣಿಕವಾಗಿ ಮುಂದುವರೆಯಲು ಸಾಧ್ಯ. ರಾಜ್ಯದಲ್ಲಿರುವ ದೇವಾಂಗ, ಕುರುಹಿನಶೆಟ್ಟಿ, ಪದ್ಮಶಾಲಿ, ಪಟ್ಟಸಾಲಿ, ತೊಗಟವೀರ, ಶೆಟ್ಟಿಗಾರ, ಸ್ವಕುಳ ಸಾಳಿ, ಕೋಷ್ಠಿ, ಹಟಗಾರ, ಶಿವಸಮಸಾಲಿ, ಜಾಡ ಹೆಸರಿನಿಂದ ಗುರುತಿಸಲ್ಪಟ್ಟಿದ್ದು, ಅಂದಾಜು 50 ಲಕ್ಷ ಜನಸಂಖ್ಯೆಯನ್ನು ನೇಕಾರ ಸಮುದಾಯ ಒಳಗೊಂಡಿದೆ. ಆದರೂ ಸಹಿತ ಪ್ರಗತಿ ಸಾಧ್ಯವಾಗುತ್ತಿಲ್ಲ.**
>
> **- ಡಾ.ಬಸವರಾಜ ಕೇಲಗಾರ**
> ರಾಜ್ಯ ಸಂಚಾಲಕ, ನೇಕಾರರ ಪ್ರಕೋಷ್ಠ ಹಾಗೂ ಬಿಜೆಪಿ ಮುಖಂಡರು, ರಾಣೇಬೆನ್ನೂರು.

## ಸಮರ್ಪಕ ಚಿಕಿತ್ಸೆ ಸಿಗದೇ ಗರ್ಭಿಣಿ ಸಾವು

### ಆಸ್ಪತ್ರೆ ಮುಂಭಾಗ ಮೃತಳ ಸಂಬಂಧಿಕರ ಆಕ್ರೋಶ



ಚನ್ನಗಿರಿ, ನ.8- ಸಮರ್ಪಕ ಚಿಕಿತ್ಸೆ ಸಿಗದೆ ಗರ್ಭಿಣಿ ಸಾವಿಗೀಡಾಗಿರುವುದಾಗಿ ಆರೋಪಿಸಿ ಮೃತಳ ಸಂಬಂಧಿಕರು ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗದಲ್ಲಿ ಇಂದು ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚನ್ನಗಿರಿ ತಾಲ್ಲೂಕಿನ ತಾವರೆಕೆರೆ ಗ್ರಾಮದ ಖಮರುನ್ನೀಸಾ (25) ಮೃತ ಗರ್ಭಿಣಿ. ಹೆರಿಗೆ ನೋವು ಕಾಣಿಸಿಕೊಂಡಾಗ ಶನಿವಾರ ಈಕೆಯನ್ನು ತಾವರೆಕೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಾಖಲಿಸಲಾಗಿತ್ತು.

ಚಿಕಿತ್ಸೆ ನೀಡಲು ವೈದ್ಯರು ಇಲ್ಲದ ಕಾರಣ ಸುಮಾರು ಒಂದು ತಾಸಿಗೂ ಹೆಚ್ಚು ಸಮಯ ಆಸ್ಪತ್ರೆಯಲ್ಲಿದ್ದ ಸಿಬ್ಬಂದಿಗಳು ಕಾಯಿಸಿದರು. ನಂತರ ಚನ್ನಗಿರಿಗೆ ಹೋಗುವಂತೆ ತಿಳಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಆಸ್ಪತ್ರೆಗೆ ಕುಟುಂಬಸ್ಥರು ಕೊಂಡೊಯ್ಯುತ್ತಿರುವಾಗ ಮಾರ್ಗ ಮಧ್ಯೆ ಹೆರಿಗೆಯಾಗಿದ್ದು, ಮಗುವಿಗೆ ಜನ್ಮ ನೀಡಿ ಮಹಿಳೆ ಮೃತಪಟ್ಟಿದ್ದು, ಮಗು ಬದುಕುಳಿದಿದೆ ಎಂದು ಹೇಳಲಾಗಿದೆ.

ಈ ಘಟನೆಯಿಂದ ಅಸಮಾಧಾನಗೊಂಡ ಮೃತಳ ಸಂಬಂಧಿಕರು ತಾವರೆಕೆರೆ ಆಸ್ಪತ್ರೆಗೆ ಬೀಗ ಜಡಿದು ಪ್ರತಿಭಟಿಸಿದ್ದಾರೆ. ಸ್ಥಳಕ್ಕೆ ಚನ್ನಗಿರಿ ಠಾಣೆ ಪೊಲೀಸರು ಭೇಟಿ ನೀಡಿದ್ದರು.

## ಪತ್ರಿಕಾ ವಿತರಕರಿಗೆ ಸೌಲಭ್ಯಕ್ಕೆ ಆಗ್ರಹ



ದಾವಣಗೆರೆ, ನ.8- ವರ್ಷದ 361 ದಿನಗಳ ಕಾಲವೂ ನಿತ್ಯ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಪತ್ರಿಕಾ ವಿತರಕರಿಗೆ ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ಕಲ್ಪಿಸಿಕೊಡುವಂತೆ ಒತ್ತಾಯಿಸಿ ಪತ್ರಿಕಾ ವಿತರಕರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಸರ್ಕಾರವು ಪತ್ರಿಕಾ ವಿತರಕರಿಗೆ ಕ್ಷೇಮ ನಿಧಿ ಸ್ಥಾಪಿಸಲು 2 ಕೋಟಿ ರೂ.ಗಳನ್ನು ಘೋಷಣೆ ಮಾಡಿದ್ದರೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ ಎಂದು ಪತ್ರಿಕಾ ವಿತರಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ವಿತರಕರಿಗೆ ಮಳಿಗೆ ಅವಶ್ಯಕತೆ ಇದೆ. ಬೆಂಗಳೂರಿನಲ್ಲಿ ನೀಡಿರುವಂತೆ ವಿಮೆ ಹಾಗೂ ಮಳಿಗೆ ಸೌಲಭ್ಯ ನೀಡಬೇಕು. ಆರೋಗ್ಯ ವಿಮೆ, ಪಿಂಚಣಿ, ಉಚಿತ ವಸತಿ, ವಾಹನ ಹಾಗೂ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕಲ್ಪಿಸುವಂತೆ ಪತ್ರಿಕಾ ವಿತರಕರುಗಳಾದ ಎ.ಎನ್ ಕೃಷ್ಣಮೂರ್ತಿ, ಪಿ.ಪ್ರಕಾಶ್, ಕುಮಾರಸ್ವಾಮಿ, ಆನಂದ್, ಶ್ರೀನಿವಾಸ್ ಮತ್ತು ಇತರರು ಒತ್ತಾಯಿಸಿದ್ದಾರೆ.

## ನಗರದಲ್ಲಿ ಇಂದು ಪುಟ್ಟರಾಜು ಅವರಿಗೆ ನುಡಿ ನಮನ

ದಾವಣಗೆರೆ, ನ.8- ಡಿ.ಜಿ. ಪುಟ್ಟರಾಜು ಗೆಳೆಯರ ಬಳಗ ಹಾಗೂ ಜೆ.ಎಚ್. ಪಟೇಲ್ ಕಾಲೇಜು ಇವುಗಳ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 9ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ದೊಗ್ಗಳ್ಳಿ ಗೌಡ್ರು ಪುಟ್ಟರಾಜು ಅವರಿಗೆ ನುಡಿ ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ವಹಿಸುವರು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಕಾರ್ಯಕ್ರಮವನ್ನು ಉದ್ಘಾಟಿಸುವರು ಎಂದು ದಾವಣಗೆರೆ ವಿವಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ. ಹೆಚ್. ವಿಶ್ವನಾಥ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ನಿವೃತ್ತ ಜಿಲ್ಲಾಧಿಕಾರಿ ಎಸ್.ಟಿ. ಅಂಜನ್ ಕುಮಾರ್, ಶಿವಮೊಗ್ಗದ ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ್, ರೈತ ಮುಖಂಡ ತೇಜಸ್ವಿ ಪಟೇಲ್, ಹೆಚ್. ಚಂದ್ರಪ್ಪ, ಪ್ರತಿಭಾ ಪಿ. ದೊಗ್ಗಳ್ಳಿ ಮತ್ತಿತರರು ಭಾಗವಹಿಸಲಿದ್ದು, ಭಾರತ ವಿಜ್ಞಾನ ಸಮಿತಿಯ ಕಾರ್ಯದರ್ಶಿ ಕಲಿವೀರ ಕಳ್ಳಿಮನಿ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಬಳಗದ ಕರಿಬಸಪ್ಪ, ಉಮೇಶ್ ಬಾಬು, ಹನುಮಂತಪ್ಪ, ಗಿರೀಶ್ ಎಸ್. ದೇವರಮನಿ ಸೇರಿದಂತೆ ಇತರರಿದ್ದರು.

## ವಿದ್ಯುತ್ ದರ ಏರಿಕೆ : ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ವಿರೋಧ

ದಾವಣಗೆರೆ, ನ.8- ರಾಜ್ಯ ಸರ್ಕಾರ ವಿದ್ಯುತ್ ದರ ಏರಿಕೆ ಮಾಡಿರುವುದನ್ನು ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘ ವಿರೋಧಿಸಿದೆ.

ಕೋವಿಡ್ ಸಂಕಷ್ಟದ ಸಮಯದಲ್ಲಿ ಅನೇಕ ಕೈಗಾರಿಕೆಗಳು ಮುಚ್ಚುವಂತಹ ಪರಿಸ್ಥಿತಿಯಲ್ಲಿವೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಸರ್ಕಾರ ವಿದ್ಯುತ್ ದರ ಏರಿಕೆ ಮಾಡಿರುವುದು ಜನರಿಗೆ ಗಾಯದ ಮೇಲೆ ಬರೆ ಎಳೆದಂತೆ ಆಗುತ್ತದೆ ಎಂದು ಜಂಬಗಿ ರಾಧೇಶ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈಗಾಗಲೇ ಶೇ. 15 ರಿಂದ ಶೇ. 20 ರಷ್ಟು ಕೈಗಾರಿಕೆಗಳು ಸ್ಥಗಿತಗೊಂಡಿವೆ. ಲಕ್ಷಾಂತರ ಜನರು ಕೆಲಸ ಕಳೆದುಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ವಿದ್ಯುತ್ ದರ ಏರಿಕೆಯನ್ನು ಸಂಘ ವಿರೋಧಿಸುತ್ತದೆ ಹಾಗೂ ಮುಂದಿನ 3 ವರ್ಷದವರೆಗೆ ವಿದ್ಯುತ್ ದರ ಏರಿಕೆ ಮಾಡಬಾರದು ಎಂದು ಆಗ್ರಹಿಸುತ್ತದೆ. ಉದ್ಯಮಗಳ ಮೇಲಿನ ವಿದ್ಯುತ್ ದರ ಹೆಚ್ಚಿಸುವ ಬದಲಾಗಿ ಕಡಿಮೆ ಮಾಡಬೇಕು ಎಂದು ಜೆಂಬಗಿ ರಾಧೇಶ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

## ಜಗಳೂರಿನಲ್ಲಿ ಇಂದಿನಿಂದ ಉಚಿತ ದಂತ ಚಿಕಿತ್ಸಾ ಶಿಬಿರ

ಕೋವಿಡ್ 19 ಮಹಾಮಾರಿಯಿಂದ ಗುಣಮುಖರಾಗಿರುವವರಿಗೆ ಉಚಿತ ದಂತ ಪರೀಕ್ಷೆ ಶಿಬಿರವನ್ನು ಜಗಳೂರಿನ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಪಕ್ಕದ ಶ್ರೀ ಕೆ.ಎಂ. ಕಲ್ಲಯ್ಯ ಸ್ಮಾರಕ ಆರೋಗ್ಯ ಕೇಂದ್ರದಲ್ಲಿ ಇಂದಿನಿಂದ ಇದೇ ದಿನಾಂಕ 13 ರವರೆಗೆ ಏರ್ಪಡಿಸಲಾಗಿದೆ. ದಿ. ಶ್ರೀಮತಿ ಗೌರಮ್ಮ ವಿಶ್ವನಾಥ ಅವರ ಜನ್ಮ ದಿನದ ಪ್ರಯುಕ್ತ 5 ದಿನಗಳ ಕಾಲ ಈ ಶಿಬಿರ ನಡೆಯಲಿದ್ದು, ಕೋವಿಡ್ ನಿಂದ ಗುಣಮುಖರಾದವರು ಮೊ. 9036577528, 98269 15042 ರಲ್ಲಿ ಸಂಪರ್ಕಿಸಿ ಹೆಸರು ನೋಂದಾಯಿಸಬಹುದು ಎಂದು ಡಾ. ಹಾಲಸ್ವಾಮಿ ಕಂಬಾಳಿಮಠ್, ಡಾ. ದೀಪಶ್ರೀ ಕಂಬಾಳಿಮಠ್ ತಿಳಿಸಿದ್ದಾರೆ.

## ಐಎಎಸ್, ಕೆಎಎಸ್ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ನ. 8- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 'ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ'ದ ವತಿಯಿಂದ ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯ ಲೋಕಸೇವಾ ಆಯೋಗವು 2021 ರಲ್ಲಿ ನಡೆಸಲಿರುವ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 60 ದಿನಗಳ ಆನ್‌ಲೈನ್ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ. ಆಸಕ್ತರು ಇದೇ ದಿನಾಂಕ 13 ರೊಳಗೆ ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಆವರಣದಲ್ಲಿರುವ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಕಛೇರಿಯಲ್ಲಿ ಹೆಸರು ನೋಂದಾಯಿಸಬಹುದು. ವಿವರಕ್ಕೆ ದೂರವಾಣಿ 0821-2515944ರಲ್ಲಿ ಸಂಪರ್ಕಿಸಬಹುದೆಂದು ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಲಿಂಗರಾಜ ಗಾಂಧಿ ತಿಳಿಸಿದ್ದಾರೆ.

## ಕಪ್ಪು ಹಣ ಇಳಿಕೆ

**(1ನೇ ಪುಟದಿಂದ)** ಕಡಿಮೆಯಾಗಿದೆ, ತೆರಿಗೆ ಪಾವತಿ ಹೆಚ್ಚಾಗಿದೆ ಹಾಗೂ ಆರ್ಥಿಕ ವ್ಯವಸ್ಥೆ ಔಪಚಾರಿಕವಾಗಿದೆ. ಇದರಿಂದಾಗಿ ಪಾರದರ್ಶಕತೆ ಹೆಚ್ಚಾಗಿದೆ ಎಂದವರು ತಿಳಿಸಿದ್ದಾರೆ.

ಈ ಪರಿಣಾಮಗಳಿಂದಾಗಿ ದೇಶದ ಪ್ರಗತಿಗೆ ಅಪಾರವಾಗಿ ಹೆಚ್ಚಾಗಿದೆ ಎಂದು ಮೋದಿ ತಿಳಿಸಿದ್ದಾರೆ.

## ಇಂದು ಜ್ಞಾನತಾಣ

ಗ್ರಾಮೀಣ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದಲ್ಲಿ ಅಂತರ್ಜಾಲ ಶಿಕ್ಷಣ ವ್ಯವಸ್ಥೆ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಕ್ಕೆ ನಗರದ ಯೋಜನಾ ಕಛೇರಿಯಲ್ಲಿ ನಡೆಯಲಿದೆ.

### ದಿನದ ಚುಟುಕು

ಮೌನದ ಅರ್ಥ ನೂರಾರು
ಅರಿತು ನಡೆಯಿರಿ ಹುಷಾರು
ಮಾತಿನ ಅರ್ಥ ಕೆಲವಾರು
ಆಗುವ ಅನರ್ಥ ಹಲವಾರು !

- ವೀಕೆಎಂ.

## ಸಿಇಟಿ ಅರ್ಜಿಗಳಲ್ಲಿನ ವಿವರ ತಿದ್ದುಪಡಿಗೆ ಅವಕಾಶವಿಲ್ಲದೇ ತೊಡಕು

### ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸಲು ಆಗ್ರಹ

ದಾವಣಗೆರೆ, ನ. 8 – ಕಳೆದ ಸಿಇಟಿ -2020 ಪರೀಕ್ಷೆಗಾಗಿ ಸಲ್ಲಿಸಿದ್ದ ಅರ್ಜಿಗಳಲ್ಲಿನ ವಿವರಗಳನ್ನು ತಿದ್ದುಪಡಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ನೀಡಿಲ್ಲ ಹಾಗೂ ದಾಖಲೆಗಳ ಅಪ್‌ಲೋಡ್ ಸಮಯದಲ್ಲಿ ಆಗುತ್ತಿರುವ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಂಡಿಲ್ಲ. ಇದರಿಂದಾಗಿ ನೂರಾರು ವಿದ್ಯಾರ್ಥಿಗಳ ವೈದ್ಯಕೀಯ ಪ್ರವೇಶಕ್ಕೆ ಸಮಸ್ಯೆಯಾಗಿದೆ ಎಂದು ಶಿವಮೊಗ್ಗದ ಪ್ರಗತಿ ಆಪಲ್ ಎಜುಕೇಷನ್‌ನ ಬಿ.ವಿಜಯಕುಮಾರ್ ದೂರಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಪನಹಳ್ಳಿ ತಾಲ್ಲೂಕಿನ ಕೆರೆಗುಡಿಹಳ್ಳಿಯ ಜಿ.ವಿ. ಸಿಂಧು ಎಂಬುವವರ ಉದಾಹರಣೆ ನೀಡಿ, ಇವರು ಹೈದರಾಬಾದ್ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ್ದು ಮೀಸಲಾತಿಗೆ ಅರ್ಹರಾಗಿದ್ದರೂ ಪ್ರಮಾಣ ಪತ್ರ ತಿರಸ್ಕರಿಸಲಾಗಿದೆ. ಈ ತೊಡಕು ಬಗೆಹರಿಸಿಕೊಳ್ಳಲು ಪ್ರಾಧಿಕಾರ ಸ್ಪಂದಿಸುತ್ತಿಲ್ಲ ಎಂದು ತಿಳಿಸಿದರು.

ಇಂತಹ ಸಮಸ್ಯೆಗಳ ಬಗ್ಗೆ ಪ್ರಾಧಿಕಾರದ ಸಿ.ಇ.ಟಿ. ಸೆಲ್‌ಗೆ ದೂರವಾಣಿ ಕರೆ ಮಾಡಿದರೂ ಸ್ವೀಕರಿಸುತ್ತಿಲ್ಲ. ಇ-ಮೇಲ್‌ಗೂ ಉತ್ತರಿಸುತ್ತಿಲ್ಲ. ಮತ್ತೊಂದೆಡೆ ಕೇಂದ್ರದ ಎನ್.ಟಿ.ಎ. ನಡೆಸಿದ ನೀಟ್ ಪರೀಕ್ಷೆಯ ಅರ್ಜಿಯಲ್ಲಿನ ತಪ್ಪುಗಳನ್ನು ತಿದ್ದುಪಡಿ ಮಾಡಿಕೊಳ್ಳಲು ನಾಲ್ಕು ದಿನಗಳ ಸಮಯ ನೀಡಲಾಗಿತ್ತು ಎಂದು ಹೇಳಿದರು.

ನೀಟ್ ಮಾದರಿಯಲ್ಲೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಹ ಅರ್ಜಿಗಳಲ್ಲಿನ ಮಾಹಿತಿಗಳನ್ನು ಸರಿಪಡಿಸಿಕೊಳ್ಳಲು ಹಾಗೂ ತಾಂತ್ರಿಕ ಕಾರಣಗಳಿಗಾಗಿ ಆದ ಸಣ್ಣ ಪುಟ್ಟ ತಪ್ಪುಗಳನ್ನು ತಿದ್ದಿಕೊಳ್ಳಲು ಎರಡು ದಿನಗಳ ಕಾಲವಾದರೂ ಸಮಯಾವಕಾಶ ನೀಡಬೇಕು. ಇಲ್ಲವಾದಲ್ಲಿ ವಿದ್ಯಾರ್ಥಿಗಳ ಪರಿಶ್ರಮ ವ್ಯರ್ಥವಾಗುತ್ತದೆ ಎಂದು ವಿಜಯಕುಮಾರ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ವಿದ್ಯಾರ್ಥಿನಿ ಜಿ.ವಿ. ಸಿಂಧು ಉಪಸ್ಥಿತರಿದ್ದರು.

## ನೋಟು ರದ್ದತಿಯಿಂದ ಆರ್ಥಿಕತೆ ನಾಶ

**(1ನೇ ಪುಟದಿಂದ)** ರನ್ನು ಕಾನೂನು ಬದ್ಧ ದರೋಡೆ ಮಾಡಿದಂತೆ ಎಂದು ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಹೇಳಿದ್ದನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಜಯ್ ಮಾಕೆನ್ ನೆನಪಿಸಿದ್ದಾರೆ.

ಮೋದಿ ಸರ್ಕಾರ ನೋಟು ರದ್ದತಿಯ ಉದ್ದೇಶಗಳನ್ನು ಕಾಲಾನುಕಾಲಕ್ಕೆ ಬದಲಿಸುತ್ತಿದೆ. ಕಪ್ಪು ಹಣ ಭ್ರಷ್ಟಾಚಾರ ತಡೆಗಾಗಿ ನೋಟು ರದ್ದತಿ ಎಂದು ಒಮ್ಮೆ ಹೇಳಿದರೆ, ನಂತರ ಉಗ್ರವಾದ ನಿವಾರಣೆ, ಬ್ಯಾಂಕುಗಳಲ್ಲಿ ಹಣ ಠೇವಣಿ ಮಾಡುವುದು, ತೆರಿಗೆ ವಿಸ್ತರಣೆ, ಪಾರದರ್ಶಕ ಜಿ.ಡಿ.ಪಿ. ಹಾಗೂ ಆರ್ಥಿಕ ಬೆಳವಣಿಗೆ, ರಿಯಲ್ ಎಸ್ಟೇಟ್ ಬೆಲೆ ಇಳಿಕೆ ಸೇರಿದಂತೆ ಹಲವಾರು ಕಾರಣಗಳನ್ನು ನೀಡುತ್ತಿದೆ ಎಂದು ಮಾಕೆನ್ ಹೇಳಿದ್ದಾರೆ.

ರದ್ದಾದ ನೋಟುಗಳ ಶೇ.99.3ರಷ್ಟು ಮತ್ತೆ ಚಲಾವಣೆಗೆ ಬಂದಿವೆ. ಭ್ರಷ್ಟಾಚಾರ ಹೆಚ್ಚಾಗಿದ್ದು, ಅದರಿಂದ ಶಾಸಕರ ಖರೀದಿ ನಡೆಸಿ ಬಿಜೆಪಿಯೇತರ ಸರ್ಕಾರ ಅಸ್ಥಿರಗೊಳಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ನೋಟು ರದ್ದತಿಯ ನಂತರವೂ ನಕಲಿ ನೋಟುಗಳ ಹಾವಳಿ ಹೆಚ್ಚಾಗಿದೆ. ನಗದು ವಹಿವಾಟು ಹೆಚ್ಚಾಗಿದೆ. ನೋಟು ರದ್ದತಿಯಿಂದ ಯಾವುದೇ ಸಕಾರಾತ್ಮಕ ಪರಿಣಾಮವಾಗಿಲ್ಲ. ರಿಯಲ್ ಎಸ್ಟೇಟ್ ಮೇಲೆ ಕರಾಳ ಪರಿಣಾಮವಾಗಿದ್ದು, ಉದ್ಯೋಗ ನಷ್ಟವಾಗಿದೆ ಎಂದು ಹೇಳಿದ್ದಾರೆ.

ನೋಟು ರದ್ದತಿ ಪ್ರಧಾನಿ ಮೋದಿಯವರ ಕ್ಷುದ್ರ ಬಂಡವಾಳಶಾಹಿ ಸ್ನೇಹಿತರಿಗೆ ನೆರವಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತರಾಟೆಗೆ ತಗೆದುಕೊಂಡಿದ್ದಾರೆ.

## ಸಾಮಾಜಿಕ ನ್ಯಾಯಕ್ಕೆ ನಾಯಕತ್ವ ಅಗತ್ಯವಿದೆ

**(1ನೇ ಪುಟದಿಂದ)** ಸಾಧ್ಯ. ಎಲ್ಲರೂ ಒಗ್ಗಟ್ಟಾಗಿ ಕಾರ್ಯ ನಿರ್ವಹಿಸಿದರೆ ಸರ್ಕಾರದಿಂದ ಸಿಗುವ ಸೌಲಭ್ಯಗಳು ಸಿಗಲಿವೆ. ಅದಕ್ಕಾಗಿ ನಾವೆಲ್ಲರೂ ಒಗ್ಗಟ್ಟಾಗಿ ಹೋಗೋಣವೆಂದರು.

ಶ್ರೀಗಳು ನನಗೆ ಪ್ರಶಸ್ತಿ ನೀಡುವುದಾಗಿ ಹೇಳಿದಾಗ ನಾನು ಬೇಡವೆಂದೆ. ಆದರೂ ಸಹ ಶ್ರೀಗಳು ಒತ್ತಾಯ ಮಾಡಿ ಪ್ರಶಸ್ತಿ ನೀಡಿದ್ದಾರೆ. ಈ ಪ್ರಶಸ್ತಿ ನನಗಲ್ಲ ನಮ್ಮ ಸಮಾಜಕ್ಕೆ ಸಿಕ್ಕ ಗೌರವವಾಗಿದೆ. ಈ ಪ್ರಶಸ್ತಿಯಿಂದ ನನಗೆ ಇನ್ನೂ ಹೆಚ್ಚಿನ ಜವಾಬ್ದಾರಿ ನೀಡಿದಂತಾಗಿದೆ ಎಂದರು.

ಕಾರ್ಯದರ್ಶಿ ಪ್ರಕಾಶ್ ಬೂಸ್ನೂರ್ ಮಾತನಾಡಿ, ಕನ್ನಡಿಗರಿಗೆ ಇನ್ನೂ ಸಹ ಕೆಲವೆಡೆ ಸೌಲಭ್ಯಗಳು ಸಿಗುತ್ತಿಲ್ಲ. ಬ್ಯಾಂಕ್ ಸೇರಿದಂತೆ ಹಲವೆಡೆ ಕನ್ನಡದಲ್ಲೇ ವ್ಯವಹಾರಗಳು ನಡೆಯುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಗೌರವ ಅಧ್ಯಕ್ಷ ಗುರುಬಸಪ್ಪ ಬೂಸ್ನೂರ್ ಮಾತನಾಡಿದರು. ಸಾವಳಗಿ ಫಾರ್ಮದ ಜಗದೀಶ್ ಮಾಸ್ಕ್ ವಿತರಣೆ ಮಾಡಿದರು.

ಸುಜಾತಮ್ಮ ಪ್ರಾರ್ಥಿಸಿದರು. ಜ್ಞಾನೇಶ್ವರ್ ಜವಳಿ ನಿರೂಪಿಸಿದರು, ಜಗದೀಶ್ ಬಾವಿಕಟ್ಟೆ ವಂದಿಸಿದರು.


**ಸುಭದ್ರ ಆರ್ಥಿಕ ಅಭಿವೃದ್ಧಿಗಾಗಿ**

ಆತ್ಮೀಯರೆ, ಸಾಲದ EMI ನಿಂದ ಮುಕ್ತರಾಗಿ ಉಳಿತಾಯದ ಹೆಜ್ಜೆಗೆ ಸಾಗಲು ಸುರಕ್ಷಿತ ಹೂಡಿಕೆಯ ಮುಖಾಂತರ ಮಕ್ಕಳ ವಿದ್ಯಾಭ್ಯಾಸ, ಮದುವೆ ಹಾಗೂ ನಿವೃತ್ತಿ ಜೀವನದ ನೆಮ್ಮದಿಯ ಆರ್ಥಿಕ ಜೀವನಕ್ಕಾಗಿ ಹಣವನ್ನೇ ದುಡಿಸುವ ಮುಖಾಂತರ ಆರ್ಥಿಕವಾಗಿ ಸದೃಢರಾಗಲು ಸಂಪರ್ಕಿಸಿ :

ANVITH ENTERPRISES-MPK- Financial Advisor
P.J. Extenstion, Davanagere-577002
(M) - 99809 16126



ವಿಶ್ವ ಆಯುರ್ವೇದ ಪರಿಷತ್‌ನ ಸಹಭಾಗಿತ್ವದಲ್ಲಿ



**ಧನ್ವಂತರಿ ಜಯಂತಿ ಮತ್ತು ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ**

**ಉಚಿತ ಗ್ಯಾಸ್ಟ್ರಿಕ್ ರೋಗದ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ**
ದಿನಾಂಕ 11/11/2020, ಸಮಯ : ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ರ ತನಕ
(ಮೊದಲೇ ಹೆಸರು ನೋಂದಾಯಿಸಿದ 20 ಜನರಿಗೆ ಮಾತ್ರ)

**ಉಚಿತ ಸಕ್ಕರೆ ಕಾಯಿಲೆಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ**
ದಿನಾಂಕ 12/11/2020, ಸಮಯ : ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ರ ತನಕ
(ಮೊದಲೇ ಹೆಸರು ನೋಂದಾಯಿಸಿದ 20 ಜನರಿಗೆ ಮಾತ್ರ)

**ಉಚಿತ ನರಗಳ ದೌರ್ಬಲ್ಯತೆಗೆ ಪಂಚಕರ್ಮ ಚಿಕಿತ್ಸೆ**
ದಿನಾಂಕ 10/11/2020 ರಿಂದ 12/11/2020ರ ತನಕ
(ಮೊದಲೇ ಹೆಸರು ನೋಂದಾಯಿಸಿದ 09 ಜನರಿಗೆ ಮಾತ್ರ)

**ಧನ್ವಂತರಿ ಹೋಮ** ದಿನಾಂಕ 13/11/2020 ಸಮಯ : ಬೆಳಿಗ್ಗೆ 8 ಗಂಟೆಯಿಂದ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ANVAYA **ಅನ್ವಯ ಆಯುರ್ವೇದ ಆಸ್ಪತ್ರೆ**

#1981, 10ನೇ ಕ್ರಾಸ್, ಆಶ್ರಯ ಆಸ್ಪತ್ರೆ ಹಿಂಭಾಗ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
ಫೋ. : 08192-252228, ಮೊ. : 8618642929



**ಶ್ರೀ ಹರ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ ಹರಿಹರ. ಹರಿಹರ ತಾಲ್ಲೂಕು**

** ವಾಹನದ ಬಹಿರಂಗ ಹರಾಜು ನೋಟೀಸ್ **


ನಮ್ಮ ಸಹಕಾರ ಸಂಘದ ಗ್ರಾಹಕರಿಗೂ, ಸದಸ್ಯರಿಗೂ ಮತ್ತು ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೇ ನಮ್ಮ ಸಹಕಾರಿಯ ವಾಹನಾಧಾರಿತ ಸಾಲ (ಹೈಪಾಥಿಕೇಷನ್ ನಿಯಮಾನುಸಾರ ವಾಹನ (ನಾಲ್ಕು ಚಕ್ರ)) ಸಾಲ ಪಡೆದು ವಾಹನ ಸಾಲ ಬಾಕಿಯಾಗಿ ಸಹಕಾರಿ ಬೈಲಾ & ನಿಯಮಾನುಸಾರ ವಾಹನವನ್ನು ಸೀಜ್ ಮಾಡಿ, ಸಹಕಾರಿಯು ಸದರಿ ವಾಹನವನ್ನು ವಶಕ್ಕೆ ಪಡೆದಿದ್ದು, ಅಂತಹ ವಾಹನವನ್ನು ಸಹಕಾರಿಯವರು ದಿನಾಂಕ 19.11.2020ರ ಗುರುವಾರ ಬೆಳಿಗ್ಗೆ 11.30 ಸಮಯಕ್ಕೆ ಸಹಕಾರಿಯ (ಶ್ರೀ ಹರ ವಿವಿಧೋದ್ದೇಶ ಸಹಕಾರ ಸಂಘ) ಕಛೇರಿಯಲ್ಲಿ ಸಾರ್ವಜನಿಕ ಬಹಿರಂಗ ಹರಾಜು ಮಾಡಲಾಗುವುದು. ವಾಹನದ ಬಾಕಿ ಸಾಲ ವಾಯಿದೆ ಇತರೆ ವಿವರಗಳನ್ನು ಈ ಕೆಳಗೆ ನಮೂದಿಸಿದೆ.

| ಕ್ರಂ. ಸಂಖ್ಯೆ | ಸಾಲದ ಖಾತೆ ನಂ. | ಸಾಲಗಾರರ ಹೆಸರು ಮತ್ತು ವಿಳಾಸ | ಮಂಜೂರಾದ ಸಾಲದ ಮೊಬಲಗು | ಬರಬೇಕಾದ ಬಾಕಿ ಮೊತ್ತ | ವಾಹನದ ವಿವರ ಮತ್ತು ಮಾಡೆಲ್ |
|---|---|---|---|---|---|
| 01 | 3/17 | ಬಸವರಾಜಪ್ಪ S/o ಮುದಿಯಪ್ಪ, ಸಾಲಕಟ್ಟೆ (V) ದೇವರಬೆಳಕೆರೆ (P), ಹರಿಹರ ತಾ॥ | RS- 30,7000 | ಅಸಲು- 318570+ಬಡ್ಡಿ+ ಸುಸ್ತಿ ಬಡ್ಡಿ ಸೇರಿ = 95080/- ಒಟ್ಟು - 413650 | ರೆನಾಲ್ಟ್ ಕ್ವಿಡ್ 1000 C.C (ವೈಟ್) Model 2017 |

**ಸೂಚನೆ:** 1) ವಾಹನ ಹರಾಜಿನಲ್ಲಿ ಭಾಗವಹಿಸುವವರು ರೂ 5000-00 ಮುಂಗಡ ಹಣವನ್ನು ಸಹಕಾರಿಯಲ್ಲಿ ಜಮಾ ಮಾಡಿ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.
2) ವಾಹನವನ್ನು ವೀಕ್ಷಿಸಲು ಸೀಜ್ ಮಾಡಿ ಇಟ್ಟಿರುವ ಸ್ಥಳದಲ್ಲಿ ವೀಕ್ಷಿಸಬಹುದು. ಅತ್ಯಧಿಕ ಬಿಡ್ ಮಾಡಿದವರಿಗೆ ವಾಹನವನ್ನು ಬಿಟ್ಟು ಕೊಡಲಾಗುವುದು.
3) ಅತ್ಯಧಿಕ ಬಿಡ್ ಮಾಡಿದವರು ಹರಾಜು ಆದ ಕ್ಷಣದಲ್ಲಿ ಬಿಡ್ ಮಾಡಿದ ಶೇ. 50 ರಷ್ಟು ಹಣವನ್ನು ಸಹಕಾರಿಗೆ ಜಮಾ ಮಾಡಿ ಉಳಿದ ಹಣವನ್ನು 1 ವಾರದೊಳಗೆ ಪಾವತಿ ಮಾಡಿ ವಾಹನವನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳುವುದು, ಮೋಟಾರ್ ಕಾಯ್ದೆ ಅನ್ವಯ ವಾಹನವನ್ನು ತಮ್ಮ ವಶಕ್ಕೆ ಪಡೆಯ ಬಹುದಾಗಿದೆ.
4)ಹರಾಜು ಪ್ರಕ್ರಿಯೆಯನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ಸಹಕಾರಿಯ ಅಧಿಕಾರಕ್ಕೆ ಹಾಗೂ ಮಾರಾಟಾಧಿಕಾರಿಗಳಿಗೆ ಸೀಮಿತವಾಗಿರುತ್ತದೆ.
5) ಇನ್ನುಳಿದ ಷರತ್ತು ಕಾಯಿದೆ ನಿಯಮಾನುಸಾರಗಳಂತೆ ಒಳಪಟ್ಟಿರುತ್ತದೆ.
6) ಸಾಲದ ಮೊತ್ತಕ್ಕಿಂತ ಕಡಿಮೆ ಬಿಡ್ ಆಗಿದ್ದಲ್ಲಿ ಉಳಿದ ಮೊತ್ತಕ್ಕೆ ಸಹಕಾರಿ ವತಿಯಿಂದ ಸಾಲಗಾರರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.
7) ವಾಹನದ ವರ್ಗಾವಣೆಗೆ ತಗಲುವ ಹಾಗೂ ಇನ್ನು ಯಾವುದೇ ಶುಲ್ಕಗಳನ್ನು ಯಶಸ್ವೀ ಹರಾಜುಗಾರರೇ ಭರಿಸತಕ್ಕದ್ದು.

C.G. ಜಗದೀಶ್ – ಆಡಳಿತಾಧಿಕಾರಿಗಳು
G.V. ಲೋಕೇಶ್ – ಕಾರ್ಯದರ್ಶಿ
G.S. ಸುರೇಂದ್ರ – ಮಾರಾಟಾಧಿಕಾರಿಗಳು ಸ.ಸಂ.ಸ.ನಿ ಕಛೇರಿ, ದಾವಣಗೆರೆ.





**ಹುಟ್ಟುಹಬ್ಬದ ಶುಭಾಶಯಗಳು**

ಇಂದು ತಮ್ಮ 59ನೇ ವರ್ಷದ ಜನ್ಮ ದಿನದ ಸಂಭ್ರಮದಲ್ಲಿರುವ ಶ್ರೀ ಗುರು ಕೊಟ್ಟೂರೇಶ್ವರ ಎಂಟರ್‌ಪ್ರೈಸಸ್ ಮಾಲೀಕರೂ, ನಮ್ಮ ಆತ್ಮೀಯರೂ ಆದ

**ಶ್ರೀ ಜೆ.ಕೆ. ಮಹೇಶ್** ಅವರಿಗೆ

ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯವನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.



ಡಿ. ವಿ. ಪ್ರಕಾಶ್, ಗುಡ್ಡಿ ಬೀಡಾ ಸ್ಟಾಲ್ | ಎಸ್. ನೀಲಕಂಠಪ್ಪ | ಜಿ.ಎನ್. ಕೋಟೆಪ್ಪ, ಸಂಜಯ್ ಎಂಟರ್‌ಪ್ರೈಸಸ್ | ವಿ. ಸಿದ್ದೇಶ್, ಮಾಲೀಕರು ವಿನಾಯಕ ರೈಸ್‌ಮಿಲ್ | ಉಮೇಶಣ್ಣ, ಮಾಲೀಕರು, ಗಣೇಶ ಹೋಟೆಲ್ | ಎಸ್.ವಿ. ಸಂತೋಷ್‌ಕುಮಾರ್, ಎಸ್.ವಿ.ಟಿ. ಟೂರ್ಸ್ & ಟ್ರಾವೆಲ್ಸ್

✦ ಟಿ. ರಾಜಣ್ಣ ✦ ಅನಂತಪ್ಪ ✦ ಚಂದ್ರಣ್ಣ ✦ ಮಿಲ್ಟ್ರಿ ಮಂಜಣ್ಣ ✦ ಮಲ್ಲಿಕಾರ್ಜುನ್ ಉಪ್ಪಿನ್ ✦ ಡಾ॥ ಸತೀಶ್ ✦ ಡಾ॥ ಹರೀಶ್ ✦ ಜಯಪ್ರಕಾಶ್ ✦ ಶಿವಣ್ಣ (ಸನ್‌ಕಾರ್ಸ್) ✦ ರಾಕೇಶ್, ಅಲಗೂರ್ ಪೇಂಟ್ಸ್ ✦ ಸೋಮು (ಜಾಕಿ) ✦ ಮಲ್ಲಿಕಾರ್ಜುನ್ (ಕಾರ್ಸ್) ✦ ನಾಗರಾಜ್ (ಎಕ್ಸೈಜ್ ಡಿಸಿ) ✦ ಶಿವಕುಮಾರ್ ಎಣ್ಣೇರ ✦ ರವಿಕುಮಾರ್ ✦ ಎ.ಎಂ. ಕಟಿಗಿ ✦ ಎನ್.ಎಂ. ಮಂಜುನಾಥ ✦ ಬದ್ರಿನಾಥ್ ✦ ಎ.ಹೆಚ್. ಶಶಿಕಿರಣ ✦ ಜಯಣ್ಣ ಸೇಲ್ಸ್‌ಟ್ಯಾಕ್ಸ್ ✦ ಸೂರ್ಯನಾರಾಯಣ ನಂದಿತಾವರೆ





**ಹಾರ್ದಿಕ ಅಭಿನಂದನೆಗಳು**

ಭಾರತೀಯ ಜನತಾ ಪಾರ್ಟಿಯ ದಾವಣಗೆರೆ ಜಿಲ್ಲಾ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ

**ಶ್ರೀನಿವಾಸ್ ದಾಸಕರಿಯಪ್ಪ**

ಅವರಿಗೆ ಹಾರ್ದಿಕ ಅಭಿನಂದನೆಗಳು.





**ಎಂ. ರಾಜಪ್ಪ ಶಾಮನೂರು**
ಸದಸ್ಯರು, ಆಶ್ರಯ ಸಮಿತಿ, ಮಹಾನಗರ ಪಾಲಿಕೆ, ದಾವಣಗೆರೆ.
ಕಾರ್ಯದರ್ಶಿ, ಬಿಜೆಪಿ ಉತ್ತರ ವಿಧಾನಸಭಾ ಕ್ಷೇತ್ರ.

**ಷಣ್ಮುಖ ಶಾಮನೂರು**
ಸದಸ್ಯರು,
ಜಿಲ್ಲಾ ಬಿಜೆಪಿ ಎಸ್ಸಿ ಮೋರ್ಚಾ.



ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

**ಹಸಿರು ಪಟಾಕಿಗಳ ಮಾರಾಟ !**

* ಹೋಲ್‌ಸೇಲ್ ದರದಲ್ಲಿ ಮಾರಾಟ * 500 ರೂ. ಮೇಲ್ಪಟ್ಟ ಖರೀದಿಗೆ ಮಾತ್ರ ಅವಕಾಶ
* ಪ್ಯಾಕೆಟ್‌ಗಳ ಸೇಲ್ ಮಾತ್ರ, ಲೂಸ್ ಕೊಡುವುದಿಲ್ಲ
* ಕೋವಿಡ್ ಇರುವುದರಿಂದ ಮಾಸ್ಕ್ ಕಡ್ಡಾಯ
* ಬೆಳಗ್ಗೆ 9 ರಿಂದ ರಾತ್ರಿ 9 ವರೆಗೆ ಮಾರಾಟ

ಮೊದಲೇ ಬುಕ್ ಮಾಡಿದರೆ ಹೆಚ್ಚಿನ ರಿಯಾಯಿತಿ ಕೊಡಲಾಗುವುದು.
ಇಂದಿನಿಂದ 13.11.2020 ರ ವರೆಗೆ ಮಾತ್ರ ಮಾರಾಟ

ಜನಸಂದಣಿ ತಪ್ಪಿಸಲು ಈ ಬಾರಿ ಎಂ.ಜಿ. ರಸ್ತೆಯ ಅಂಗಡಿ ಜೊತೆಗೆ ಕುಂದುವಾಡ ರಸ್ತೆ, ಸಾಯಿ ಇಂಟರ್ ನ್ಯಾಶನಲ್ ಹೋಟೆಲ್ ಹಿಂಭಾಗ ನಮ್ಮಗೋಡೌನ್‌ನಲ್ಲೂ ಮಾರಾಟ ಮಾಡಲಾಗುವುದು.

ಹೂವಿನ ಕುಡಿಕೆ, ಚಕ್ರ, ಜೋರಸಾ, ಸರಗಳು, ಹೊಸ ಹೊಸ ತರಹದ 7 ಶಾಟ್, 12 ಶಾಟ್, 25 ಶಾಟ್, 50 ಶಾಟ್, 60 ಶಾಟ್, 100 ಶಾಟ್, 120 ಶಾಟ್, 240 ಶಾಟ್, ಸೇರಿದಂತೆ ಇನ್ನೂ ಇತರೆ ರಂಗುರಂಗಿನ ಪಟಾಕಿಗಳು ಸಿದ್ಧ ದಾಸ್ತಾನಿನಲ್ಲಿ ಸಿಗುತ್ತದೆ. ಗಿಫ್ಟ್ 250,300,350,500, 675, 900 ದರದಲ್ಲಿ ದೊರೆಯುತ್ತದೆ.

ಪಟಾಕಿಗಳು ದೊರೆಯುವ ಸ್ಥಳ

**ಕಿರಣ್, ಆಶಾ ಜನರಲ್ ಸ್ಟೋರ್**
ಎಂ.ಜಿ. ರಸ್ತೆ, ದಾವಣಗೆರೆ.
ಕುಂದುವಾಡ ರಸ್ತೆ, ಸಾಯಿ ಇಂಟರ್ ನ್ಯಾಶನಲ್ ಹಿಂಭಾಗ, ದಾವಣಗೆರೆ.
ಫೋನ್ ನಂ.: 9449829236, 9844303551, 9620669555, 9448115270

## ಆರ್.ಜಿ. ಪದವಿ ಕಾಲೇಜಿನಲ್ಲಿ ಘಟಿಕೋತ್ಸವ



ದಾವಣಗೆರೆ, ನ.8- ನಗರದ ರಂಜಿತ್ ಮಲ್ ಗಾಂಧಿ ಎಜುಕೇಷನಲ್ ಟ್ರಸ್ಟ್ ನ ಆರ್.ಜಿ. ಪದವಿ ಕಾಲೇಜಿನ ವಿದ್ಯಾರ್ಥಿಗಳ ಘಟಿಕೋತ್ಸವ ಸಮಾರಂಭವು ಸ್ಥಳೀಯ ಎಸ್.ಎಸ್. ಮಾಲ್ ಹಿಂಭಾಗದ ಪಾರ್ವತಿ ಪರ್ಲ್ಸ್ ಸಮುದಾಯ ಭವನದಲ್ಲಿ ಇಂದು ನಡೆಯಿತು. ದಾವಣಗೆರೆ ವಿಶ್ವವಿದ್ಯಾಲಯದ ಪರೀಕ್ಷಾಂಗ ವಿಭಾಗದ ಮುಖ್ಯಸ್ಥರಾದ ಡಾ. ಹೆಚ್.ಎಸ್. ಅನಿತಾ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾಲೇಜಿನ ಅಧ್ಯಕ್ಷರಾದ ಶ್ವೇತಾ ಆರ್.ಗಾಂಧಿ, ಪ್ರಾಂಶುಪಾಲ ಸುನಿಲ್ ಕುಮಾರ್, ಉಪ ಪ್ರಾಂಶುಪಾಲ ಎಂ.ಎಸ್. ವಿಜಯ್, ದಾನಪ್ಪ ಇತರರು ಉಪಸ್ಥಿತರಿದ್ದರು.

## ರಾಣೇಬೆನ್ನೂರು : ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ನ.8- ಹಲಗೇರಿ ರಸ್ತೆಯ ಅಗಲೀಕರಣದ ಕಾಮಗಾರಿ ಕೈಗೊಳ್ಳುವುದರಿಂದ ನಾಡಿದ್ದು ದಿನಾಂಕ 10 ರ ಮಂಗಳವಾರ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ರಾಣೇಬೆನ್ನೂರು 220 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೋರಡುವ ಈ-2 ಫಾರೆಸ್ಟ್ ಐಬಿ, ಈ-3 ಗುಡುಗೂರು-ಮೈದೂರು ಫೀಡರ್‌ಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

ಆದ್ದರಿಂದ ಫಾರೆಸ್ಟ್ ಐ.ಬಿ, ಗಂಗಾಜಲ ತಾಂಡಾ, ಸಿದ್ದಾಪುರ ತಾಂಡಾ, ಬಸಲಿಕಟ್ಟಿ ತಾಂಡಾ, ಗೋವಿಂದ ಬಡಾವಣೆ ಗ್ರಾಮಗಳಿಗೆ ಮತ್ತು ಐ.ಪಿ ಸೆಟ್‌ಗಳಿಗೆ ಗ್ರಾಹಕರು ಸಹಕರಿಸಲು ಕೋರಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬೆವಿಕಂನಿಂದ ತುರ್ತು ಕಾರ್ಯಹಮ್ಮಿಕೊಂಡಿರುವುದರಿಂದ ರಾಜೇಂದ್ರ ಬಡಾವಣೆ, ಸುತ್ತ ಮುತ್ತ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಲಕ್ಷ್ಮಿ ಸತೀಶ್ ಲಯನ್ಸ್ ನೇಸರ ಅಧ್ಯಕ್ಷೆ



ದಾವಣಗೆರೆ, ನ.8- ದಾವಣಗೆರೆ ಲಯನ್ಸ್ ಕ್ಲಬ್ ಪ್ರಾಯೋಜಕತ್ವದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತರಲಾಗಿರುವ ಲಯನ್ಸ್ ಕ್ಲಬ್ ನೇಸರ ಅಧ್ಯಕ್ಷರಾಗಿ ಶ್ರೀಮತಿ ಲಕ್ಷ್ಮಿ ಸತೀಶ್, ಕಾರ್ಯದರ್ಶಿಯಾಗಿ ಶ್ರೀಮತಿ ಅನಿತಾ ಶಿವಾನಂದ್, ಖಜಾಂಚಿಯಾಗಿ ಶ್ರೀಮತಿ ರೇಣುಕಾ ಎಂ.ಎಸ್. ಉದಯ ಕುಮಾರ್ ಆಯ್ಕೆಯಾಗಿದ್ದಾರೆ.

## ಗ್ರಾಸಿಂನಲ್ಲಿ ಕೃತಕ ಕಾಲು ಜೋಡಣೆ

ರಾಣೇಬೆನ್ನೂರು, ನ.8- ಕುಮಾರಪಟ್ಟಣಂನ ಗ್ರಾಸಿಂ ಜನಸೇವಾ ಟ್ರಸ್ಟ್ ವತಿಯಿಂದ ದಿ. ಆದಿತ್ಯ ವಿಕ್ರಂ ಬಿರ್ಲಾ ಅವರ ಜನ್ಮದಿನದ ಅಂಗವಾಗಿ ಇದೇ ದಿನಾಂಕ 19 ರಂದು ಉಚಿತವಾಗಿ ಕೃತಕ ಕಾಲು ಜೋಡಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ರೇಣುಕ ನಾಗನೂರ (99643 48288), ಮಂಜುನಾಥ (8722429612) ಅವರನ್ನು ಸಂಪರ್ಕಿಸಬಹುದು.

## ಪೂರ್ವ ಲಡಾಖ್ ಬಿಕ್ಕಟ್ಟು : ಭಾರತ-ಚೀನಾ ಮಾತುಕತೆ

ಲಡಾಖ್, ನ. 8 – ಪೂರ್ವ ಲಡಾಖ್ ಬಿಕ್ಕಟ್ಟು ನಿವಾರಿಸಲು ಭಾರತ ಮತ್ತು ಚೀನಾ ಇನ್ನೊಂದು ಸುತ್ತಿನ ಮಾತುಕತೆ ನಡೆಸಲಿವೆ. ಕಳೆದ ಆರು ತಿಂಗಳಿನಿಂದ ಗಡಿಯಲ್ಲಿ ಬಿಕ್ಕಟ್ಟು ಉಂಟಾಗಿದೆ. ಶುಕ್ರವಾರ ಉಭಯ ದೇಶಗಳ ಸೈನ್ಯದ ನಡುವೆ ಎಂಟನೇ ಸುತ್ತಿನ ಮಾತುಕತೆ ಆರಂಭವಾಗಿತ್ತು. ರಚನಾತ್ಮಕ ಮಾತುಕತೆಯನ್ನು ಮುಂದಿನ ಸುತ್ತಿನಲ್ಲೂ ಮುಂದುವರೆಸಲಾಗುವುದು ಎಂದು ಸೈನ್ಯದ ಮೂಲಗಳು ತಿಳಿಸಿವೆ. ಈ ವಾರದಲ್ಲೇ ಇನ್ನೊಂದು ಸುತ್ತಿನ ಮಾತುಕತೆಯ ನಿರೀಕ್ಷೆ ಇದೆ. ಕಾರ್ಪ್ಸ್ ಕಮಾಂಡರ್ ಹಂತದಲ್ಲಿ ಮಾತುಕತೆಗಳು ನಡೆಯಲಿವೆ ಎಂದು ತಿಳಿಸಲಾಗಿದೆ.


7Hills Grocery
(ಉತ್ತಮ ಸಂಪಾದನೆಗಾಗಿ) Eat Healthy...

7Hills Grocery ಸಮರ್ಪಿಸುತ್ತಿದೆ ದಿನಸಿ ಸಾಮಗ್ರಿಗಳು ಉತ್ತಮ ಗುಣಮಟ್ಟದಲ್ಲಿ, ಯೋಗ್ಯ ಬೆಲೆಯಲ್ಲಿ ಕೇವಲ Whatsapp ಮಾಡುವ ಮೂಲಕ ನಿಮ್ಮ ಸಾಮಗ್ರಿಗಳು ಮನೆಯ ಬಾಗಿಲಲ್ಲೇ ಪಡೆಯಿರಿ ಅದು ಕೂಡ **10%** ರಿಯಾಯಿತಿ ದರದಲ್ಲಿ . **(Rs.250/-** ರಿಂದ ಪ್ರಾರಂಭ ಹೋಲ್ ಸೇಲ್ ದರದಲ್ಲಿ) ಸಂಪರ್ಕಿಸಿ ; **9606864777**

**ತಕ್ಷಣ ಬೇಕಾಗಿದ್ದಾರೆ** ಡೋರ್ ಡೆಲಿವರಿಗಾಗಿ ಹುಡುಗರು ಹಾಗು ದಿನಸಿ ಕ್ಲೀನಿಂಗಾಗಿ ಮಹಿಳೆಯರು ಬೇಕಾಗಿದ್ದಾರೆ.

ಸಂಪರ್ಕಿಸಿ; **9071083033**



# ನ್ಯೂ ಎಂ.ಜಿ.ಎಸ್. ಜ್ಯುಯಲರ್ಸ್

ಬೆಳ್ಳಿ-ಬಂಗಾರದ ಅಂಗಡಿ





EXCLUSIVE SHOW ROOM FOR 91.6% HALLMARK JEWELLERY

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳು

ನಂ. 635/2, ಆನಂದ ಬುಕ್ ಡಿಪೋ ಎದುರು, ಮಂಡಿಪೇಟೆ ರಸ್ತೆ, ದಾವಣಗೆರೆ

ದೀಪಾವಳಿ ಹಬ್ಬದ ಪ್ರಯುಕ್ತ ವಿಶೇಷ ವಿನ್ಯಾಸದ ಆ್ಯಂಟಿಕ್ ಆಭರಣಗಳು ಲಭ್ಯವಿರುತ್ತವೆ.




ಯಾವುದೇ ತರಹದ ಬಂಗಾರದ ಆಭರಣಗಳ ಮೇಲೆ ವೇಸ್ಟೇಜ್ ಹಾಗೂ ಮಜೂರಿ ಇರುವುದಿಲ್ಲ.

ತೂಕ X ದರ

ಭೇಟಿ ಕೊಡಿ ದರ ಪರಿಶೀಲಿಸಿ

ನಮ್ಮಲ್ಲಿ ಆಭರಣ ಖರೀದಿಸಿ ಹಾಗೂ ವಿಜಯಯೋತ್ಸವದ ಲಕ್ಕಿ ಡ್ರಾ ಕೂಪನ್ ಉಚಿತವಾಗಿ ಪಡೆಯಿರಿ




ravimgs35@gmail.com

Manidipet Road, DAVANGERE Ph. : 08192 - 231951 9448929897, 9481308777



# ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ಸಮಾಜದ
ಶ್ರೀ ಎನ್. ಗೋದೆಪ್ಪನವರು
ದಿನಾಂಕ: 07.11.2020ನೇ ಶನಿವಾರ
ನಿಧನ ಹೊಂದಿದ್ದು, ಅವರಿಗೆ
ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತೇವೆ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ
ಈ ದುಃಖ ಭರಿಸುವ ಶಕ್ತಿಯನ್ನು ದೇವರು
ಅವರ ಕುಟುಂಬ ವರ್ಗಕ್ಕೆ ನೀಡಲಿ
ಎಂದು ಪ್ರಾರ್ಥಿಸುತ್ತೇವೆ.

ಶ್ರೀ ಎನ್. ಗೋದೆಪ್ಪನವರು
ಉಪಾಧ್ಯಕ್ಷರು,
ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ದಾವಣಗೆರೆ.

ತೊಗಟವೀರ ಸಮಾಜ ಸೇವಾ ಸಮಿತಿ ಟ್ರಸ್ಟ್ (ರಿ.)
ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ (ದೈವ ಸಮಿತಿ)
ತೊಗಟವೀರ ಹಾಸ್ಟೆಲ್ ಸಮಿತಿ,
ತೊಗಟವೀರ ಯುವಕ ಸೇವಾ ಸಂಘ,
ದಾವಣಗೆರೆ.



# ಶುಭ ವಿವಾಹ-ಶುಭ ಹಾರೈಕೆ



ದಾವಣಗೆರೆ ಸೈಂಟಿಫಿಕ್‌ನ
ಎಸ್.ಎನ್. ಮಲ್ಲಿಕಾರ್ಜುನ ಯಕ್ಕನಹಳ್ಳಿ(HRK)
ಅವರ ವಿವಾಹ ಮಹೋತ್ಸವಕ್ಕೆ ಶುಭ ಹಾರೈಕೆಗಳು

ಶುಭ ಕೋರುವವರು : ಬಂಧು- ಬಳಗ


## ಕಾಟನ್ ಸಿಟಿಯಲ್ಲಿ 'ಅಭಿ ಕಾಟನ್' ಫ್ಯಾಮಿಲಿ ಶೋ ರೂಂ





ಸತತ 10 ವರ್ಷಗಳಿಂದ ತನ್ನದೇ ಆದ ವೈಶಿಷ್ಟತೆ, ಉತ್ಕೃಷ್ಟ ಗುಣಮಟ್ಟದ ವಿವಿಧ ವಿನ್ಯಾಸದ ವೆಡ್ಡಿಂಗ್ ರೆಡಿಮೇಡ್ ಕಲೆಕ್ಷನ್‌ಗೆ ಹೆಸರುವಾಸಿ ಈ ಅಭಿ ಕಾಟನ್ ಫ್ಯಾಮಿಲಿ ಶೋ ರೂಂ.

ದಾವಣಗೆರೆ ಕಾಳಿಕಾ ದೇವಿ ರಸ್ತೆಯಲ್ಲಿರುವ ಪ್ರತಿಷ್ಠಿತ ಅಂಗಡಿಗಳಲ್ಲಿ ಒಂದಾದ ಪ್ರಸಿದ್ಧ ಈ ಶೋ ರೂಂ ಸುಮಾರು ಮೂರುವರೆ ಸಾವಿರ ಚದುರಡಿ ವಿಸ್ತೀರ್ಣವನ್ನು ಹೊಂದಿದೆ. ಇಲ್ಲಿ ಮಕ್ಕಳು, ಮಹಿಳೆಯರ ಮತ್ತು ಪುರುಷರ ರೆಡಿಮೇಡ್ ಉಡುಪುಗಳ ಜೊತೆಗೆ ಮನೆ ಅಂದ ಹೆಚ್ಚಿಸಲು ಆಕರ್ಷಕ ಹೋಂ ಫರ್ನಿಷಿಂಗ್ ಐಟಮ್ಸ್ ಲಭ್ಯ .

ಕೋವಿಡ್-19ನಿಂದಾಗಿ ಎಲ್ಲರ ಮಂದಹಾಸ ಮಾಯವಾಗಿತ್ತು . ಇದರ ನಡುವೆಯೂ ಇತ್ತೀಚೆಗೆ ಎಲ್ಲರ ಮುಖದಲ್ಲಿ ಮತ್ತೆ ಮಂದಹಾಸ ಕಾಣುತ್ತಿದೆ. ಕೊರೊನಾ ಆದಷ್ಟು ಬೇಗ ತೊಲಗಿ, ಮುಖದಲ್ಲಿ ಮಾಯವಾಗಿದ್ದ ನಗು ಮತ್ತೊಮ್ಮೆ ಗ್ರಾಹಕರ ಕುಟುಂಬದವರಲ್ಲಿ ಅರಳಲಿ.




"ಗ್ರಾಹಕರ ಅಭಿಮಾನವೇ ನಮಗೆ ಶ್ರೀರಕ್ಷೆ. ಗುಣಮಟ್ಟ, ನಂಬಿಕೆಯ ಹೆಸರಿಗೆ ನಮ್ಮ ಶೋ ರೂಂ ಪ್ರಸಿದ್ಧಿ. ಕಾಲಕ್ಕೆ ತಕ್ಕಂತೆ ತರಹೇವಾರಿ ಉಡುಪುಗಳು ನಮ್ಮಲ್ಲಿದ್ದು ಗ್ರಾಹಕರಿಗೆ ಬೇಕಾಗುವಂತಹ ಮನ ಮುಟ್ಟುವಂತಹ ಉತ್ಕೃಷ್ಟ ಗುಣಮಟ್ಟದ ಉಡುಪುಗಳನ್ನು ನೀಡುವುದೇ ನಮ್ಮ ಮೊದಲ ಆದ್ಯತೆ ಎನ್ನುತ್ತಾರೆ ಶೋ ರೂಮ್‌ನ ಮಾಲೀಕರಾದ ಎನ್. ಬಕ್ಕೇಶ್."



**ಎನ್. ಬಕ್ಕೇಶ್,**
ಮಾಲೀಕರು, ಅಭಿ ಕಾಟನ್,
ಕಾಳಿಕಾ ದೇವಿ ರಸ್ತೆ,
ದಾವಣಗೆರೆ.
ಮೊ : 9964230155




ನಮ್ಮೆಲ್ಲ ಗ್ರಾಹಕರಿಗೆ ದೀಪಾವಳಿ ಹಬ್ಬದ ಶುಭಾಶಯಗಳು

ಅಭಿ ಕಾಟನ್
ABHI Cotton

ಕಾಳಿಕಾ ದೇವಿ ರಸ್ತೆ , ದಾವಣಗೆರೆ-577001.

WEDDING READYMADE COLLECTIONS FAMILY SHOWROOM

KIDS | LADIES | MENS

### ರೆಡಿಮೇಡ್ ಗಾರ್ಮೆಂಟ್ಸ್

◆ ಜೀನ್ಸ್ ◆ ಶರ್ಟ್ಸ್ ◆ ಟಿ-ಶರ್ಟ್ಸ್ ◆ ಶೇರ್ವಾನಿ ◆ ಬ್ಲೇಜರ್ ◆ ಸೂಟಿಂಗ್ - ಶರ್ಟಿಂಗ್
◆ ಎಕ್ಸ್‌ಪೋರ್ಟ್ ಕಿಡ್ಸ್ ರೆಡಿಮೇಡ್ ◆ ಲೇಡಿಸ್ ಕುರ್ತಿಸ್ ◆ ಲೇಡಿಸ್ ಜೀನ್ಸ್
◆ ಮತ್ತು ವೆಸ್ಟರ್ನ್ ಟಾಪ್ಸ್ ◆ ಲೇಡಿಸ್ ಹ್ಯಾಂಡ್ ಬ್ಯಾಗ್ಸ್.

### ಹೋಮ್ ಫರ್ನಿಷಿಂಗ್ ಐಟಮ್ಸ್

◆ ಕರ್ಟನ್ಸ್ ◆ ಬೆಡ್ಸ್ ◆ ಟವಲ್ಸ್ ◆ ಕಾರ್ಪೆಟ್ಸ್ ◆ ಬೆಡ್ ಶೀಟ್ಸ್ ◆ ಬೆಡ್ ಸ್ಪ್ರೆಡ್ಸ್
◆ ಬ್ಲಾಂಕೆಟ್ಸ್ ◆ ಮ್ಯಾಟ್ಸ್ ◆ ಸೋಫಾ ಕವರ್ಸ್ ◆ ದಿವಾನ್ ಸೆಟ್ಸ್
◆ ಆಲ್ ಇಂಟೀರಿಯರ್ ಡೆಕೋರೇಟಿವ್ ಮೆಟಿರಿಯಲ್ಸ್





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte